# ದಿನನಿತ್ಯದ ಬಳಕೆ

ಕಾಂಪೋಸ್ಟರ್ · ಪ್ರಮಾಣಿತ ಕಾರ್ಯಾಚರಣಾ ವಿಧಾನ (SOP)

## 1. ತ್ಯಾಜ್ಯವನ್ನು ಚೂರು ಮಾಡಿ



**1 ತ್ಯಾಜ್ಯವನ್ನು ವಿಂಗಡಿಸಿ.**

ಪ್ಲಾಸ್ಟಿಕ್, ಗಾಜು, ಲೋಹ ಮತ್ತು ಆಹಾರವಲ್ಲದ ಎಲ್ಲವನ್ನೂ ತೆಗೆಯಿರಿ.



**2 ಶ್ರೆಡರ್ ಆರಂಭಿಸಿ.**

ಹಿಂಭಾಗದ ಲಿವರ್ ಬಳಸಿ. ಸರಿಯಾದ ದಿಕ್ಕಿನಲ್ಲಿ ತಿರುಗುತ್ತಿದೆಯೇ ನೋಡಿ.



**3 ಹಾಪರ್‌ನ ಪಕ್ಕದಲ್ಲಿ ನಿಲ್ಲಿ.**

ಅದರ ನೇರ ಎದುರು ನಿಲ್ಲಬೇಡಿ.



**4 ಒಮ್ಮೆಗೆ ಗರಿಷ್ಠ 5 ಕೆ.ಜಿ. ಮಾತ್ರ, ಸ್ವಲ್ಪ-ಸ್ವಲ್ಪವಾಗಿ ಹಾಕಿ.**

ಮೇಲಿನ ಹಾಪರ್‌ಗೆ ಹಾಕಿ. ಇಡೀ ಟ್ರೇಯನ್ನು ಒಮ್ಮೆಲೇ ಸುರಿಯಬೇಡಿ.

⚠ **ಶ್ರೆಡರ್ ಚಲಿಸುವಾಗ ಕೈಗಳನ್ನು ಹಾಪರ್ ಒಳಗೆ ಹಾಕಬೇಡಿ.**




**5 ಎಲ್ಲಾ ತ್ಯಾಜ್ಯ ಹಾಕಿ ಮುಗಿದ ಮೇಲೆ ಶ್ರೆಡರ್ ನಿಲ್ಲಿಸಿ.**

## 2. ಶ್ರೆಡರ್ ತೊಳೆಯಿರಿ



**1 ಕ್ಲೀನಿಂಗ್ ಟ್ರೇ ಒಳಗೆ ತಳ್ಳಿ.**

ಹಿಂಭಾಗದ ಕ್ಲೀನಿಂಗ್ ಬಾಗಿಲಿನ ಮೂಲಕ.



**2** **ಮೇಲಿನಿಂದ ನೀರು ಸುರಿಯಿರಿ.**

ನೀರು ಶ್ರೆಡರ್ ತೊಳೆದು ಟ್ರೇಗೆ ಬೀಳುತ್ತದೆ.



**3** **ಟ್ರೇ ಹೊರತೆಗೆದು ನೀರನ್ನು ಚರಂಡಿಗೆ ಸುರಿಯಿರಿ.**

## 3. ಕಾಂಪೋಸ್ಟಿಂಗ್ ಆರಂಭಿಸಿ




**1** **ಸ್ವಲ್ಪ ನುಣ್ಣನೆಯ ಮರದ ಹೊಟ್ಟು (ಸಾ ಡಸ್ಟ್) ಹಾಕಿ.**

ಪರಿಶೀಲನಾ ಬಾಗಿಲಿನ ಮೂಲಕ. ಪ್ರತಿ 30 ಕೆ.ಜಿ. ಚೂರು ಮಾಡಿದ ತ್ಯಾಜ್ಯಕ್ಕೆ 1 ಕೆ.ಜಿ. ಮರದ ಹೊಟ್ಟು.



**2** **ಎಲ್ಲಾ ಬಾಗಿಲುಗಳನ್ನು ಮುಚ್ಚಿ ಲಾಕ್ ಮಾಡಿ.**




**3** **ಸ್ಕ್ರೀನ್‌ನ ಎರಡನೇ ಪುಟಕ್ಕೆ ಹೋಗಿ.**

ಆರಂಭದ ಪುಟದಲ್ಲಿ ಹಸಿರು ಬಾಣವನ್ನು ಒತ್ತಿ ಹಿಡಿಯಿರಿ.




**4** **Automatic mode ಅನ್ನು ಒತ್ತಿ ಹಿಡಿಯಿರಿ.**

ಟವರ್ ದೀಪ ಹಸಿರಾಗುತ್ತದೆ.



**5** **ಕೆಳಗಿನ ಬಲಭಾಗದ ಬಾಣ ಒತ್ತಿ.**

ಈ ಪುಟದ ಎಲ್ಲಾ ದೀಪಗಳು ಹಸಿರಾಗಿವೆಯೇ ನೋಡಿ. ಯಾವುದಾದರೂ ಹಸಿರಾಗಿಲ್ಲವೇ? ನಮಗೆ ಕರೆ ಮಾಡಿ.



**6** **ಯಂತ್ರ ಕೆಲಸ ಮಾಡಲು ಬಿಡಿ.**

ದಿನಕ್ಕೆ ಗರಿಷ್ಠ 20 ಗಂಟೆ ಚಲಿಸುತ್ತದೆ. ತಾನಾಗಿಯೇ ನಿಂತು ಮತ್ತೆ ಆರಂಭವಾಗುತ್ತದೆ.

## 4. ಗೊಬ್ಬರ ಹೊರತೆಗೆಯಿರಿ



**1 ಅಂಬರ್ (ಹಳದಿ) ದೀಪಕ್ಕಾಗಿ ಕಾಯಿರಿ.**

ಅಂಬರ್ ಎಂದರೆ ಗೊಬ್ಬರ ಸಿದ್ಧ.



**2 ಮುಂಭಾಗದ ಬಾಗಿಲು ತೆರೆಯಿರಿ.**



**3 ಬಾಗಿಲಿನ ಮುಂದೆ ಒಂದು ಟ್ರೇ ಇಡಿ.**



**4 Discharge mode ಅನ್ನು ಒತ್ತಿ ಹಿಡಿಯಿರಿ.**

ಸ್ಕ್ರೀನ್‌ನ ಎರಡನೇ ಪುಟದಲ್ಲಿದೆ. ಸುಮಾರು 90% ಗೊಬ್ಬರ ಹೊರಬರುತ್ತದೆ.

⚠ **ಗೊಬ್ಬರ ಹೊರಬರುವಾಗ ಕೈಗಳನ್ನು ಬಾಗಿಲಿನ ಒಳಗೆ ಹಾಕಬೇಡಿ.**




**5 ಉಳಿದದ್ದನ್ನು ಒಳಗೇ ಬಿಡಿ.**

ಒಳಗೆ ಉಳಿಯುವ 10% ಮುಂದಿನ ಬ್ಯಾಚ್‌ಗೆ ಸಹಾಯ ಮಾಡುತ್ತದೆ.



**6 ಮುಂಭಾಗದ ಬಾಗಿಲಿನ ಒಳಭಾಗ ಸ್ವಚ್ಛಗೊಳಿಸಿ.**

ತಕ್ಷಣ ಮಾಡಿ, ಗೊಬ್ಬರ ಒಣಗಿ ಅಂಟಿಕೊಳ್ಳುವ ಮೊದಲು.



**7 ಮುಂಭಾಗದ ಬಾಗಿಲು ಮುಚ್ಚಿ ಲಾಕ್ ಮಾಡಿ.**

## ಶ್ರೆಡರ್ ಬಟನ್‌ಗಳು ಸ್ಕ್ರೀನ್‌ನಲ್ಲಿವೆಯೇ?




**1** **ಸ್ಕ್ರೀನ್‌ನ ಮೂರನೇ ಪುಟಕ್ಕೆ ಹೋಗಿ.**
ಕೆಲವು ಯಂತ್ರಗಳಲ್ಲಿ ಶ್ರೆಡರ್ ಲಿವರ್‌ನಿಂದಲ್ಲ, ಇಲ್ಲಿಂದ ಚಲಿಸುತ್ತದೆ.




**2** **ಕಾಂಪೋಸ್ಟಿಂಗ್ ನಡೆಯುತ್ತಿದೆಯೇ? ಮೊದಲು Pause composter ಒತ್ತಿ.**



**3** **ಶ್ರೆಡರ್ ಆರಂಭಿಸಲು ON ಒತ್ತಿ.**
ಸರಿಯಾದ ದಿಕ್ಕಿನಲ್ಲಿ ತಿರುಗುತ್ತಿದೆಯೇ ನೋಡಿ.




**4** **ಮುಗಿದ ಮೇಲೆ OFF ಒತ್ತಿ.**
ಕಾಂಪೋಸ್ಟಿಂಗ್ ತಾನಾಗಿಯೇ ಮತ್ತೆ ಆರಂಭವಾಗುತ್ತದೆ.

## ತಿಳಿದಿರಲಿ

- ⚠ ನಾವು ಹೇಳದೆ ಸೆಟ್ಟಿಂಗ್‌ಗಳನ್ನು ಬದಲಿಸಬೇಡಿ.
- ⚠ ಫೀಡಿಂಗ್ ಮಟ್ಟಕ್ಕಿಂತ ಹೆಚ್ಚು ತ್ಯಾಜ್ಯ ತುಂಬಬೇಡಿ. ಅದು ಮುಂಭಾಗದ ಬಾಗಿಲಿನಿಂದ ಚೆಲ್ಲುತ್ತದೆ.
- ⚠ ಕಾಂಪೋಸ್ಟಿಂಗ್ ಕೋಣೆಗೆ ನೇರವಾಗಿ ನೀರು ಹಾಕಬೇಡಿ.
- ⚠ ಯಂತ್ರ ಚಲಿಸುವಾಗ ಬಾಗಿಲುಗಳನ್ನು ಮುಚ್ಚಿಯೇ ಇಡಿ.
- ⚠ ಯಂತ್ರ ಚಲಿಸುವಾಗ ಅದನ್ನು ಎಂದಿಗೂ ಸರಿಸಬೇಡಿ.
- ⚠ ತುರ್ತು ಪರಿಸ್ಥಿತಿಯೇ? ಸ್ಕ್ರೀನ್‌ನಲ್ಲಿರುವ ಕೆಂಪು EMERGENCY ಬಟನ್ ಒತ್ತಿ.

## ಟವರ್ ದೀಪದ ಅರ್ಥ



- ಹಸಿರು: ಕಾಂಪೋಸ್ಟಿಂಗ್ ನಡೆಯುತ್ತಿದೆ.
- ಕೆಂಪು: ಮುಂಭಾಗದ ಬಾಗಿಲು ತೆರೆದಿದೆ.
- ಅಂಬರ್ (ಹಳದಿ): ಗೊಬ್ಬರ ಸಿದ್ಧವಾಗಿದೆ.

## ಏನು ಹಾಕಬೇಕು

### ✓ ಹಾಕಿ

**ಎಲ್ಲಾ ಆಹಾರ ತ್ಯಾಜ್ಯ**
ಹಣ್ಣು, ತರಕಾರಿ, ಮಾಂಸ, ಕೋಳಿ, ಮೀನು, ಚಿಪ್ಪುಗಳು, ಮೂಳೆಗಳು, ಪಾಸ್ತಾ, ಬೇಕರಿ ಪದಾರ್ಥಗಳು, ಚೀಸ್ ಮತ್ತು ಮೊಟ್ಟೆ ಸಿಪ್ಪೆ.

**ಆಹಾರ ಅಂಟಿದ ಕಾಗದ**
ನ್ಯಾಪ್ಕಿನ್, ಪೇಪರ್ ಟವೆಲ್, ಟೀ ಬ್ಯಾಗ್ ಮತ್ತು ಕಾಫಿ ಪುಡಿ.

**ಸಸ್ಯಗಳು**
ಹೂವುಗಳು, ಎಲೆಗಳು, ಹುಲ್ಲು ಮತ್ತು ಸಣ್ಣ ಕೊಂಬೆಗಳು.

**ಪ್ರಮಾಣೀಕೃತ ಕಾಂಪೋಸ್ಟ್ ಆಗುವ ವಸ್ತುಗಳು**
ಕಾಂಪೋಸ್ಟ್ ಆಗುವ ಚೀಲಗಳು (ASTM D6400), ಮರದ ಕಡ್ಡಿಗಳು ಮತ್ತು ಚಾಪ್‌ಸ್ಟಿಕ್‌ಗಳು.

### ✕ ಹಾಕಬೇಡಿ

- ✕ ದ್ರವಗಳು, ಗ್ರೀಸ್ ಮತ್ತು ಅಡುಗೆ ಎಣ್ಣೆ
- ✕ ಪ್ಲಾಸ್ಟಿಕ್, ಥರ್ಮಾಕೋಲ್, ಪಾರ್ಸೆಲ್ ಡಬ್ಬಿಗಳು ಮತ್ತು ಬಳಸಿ ಎಸೆಯುವ ಕಪ್‌ಗಳು
- ✕ ಗಾಜು ಮತ್ತು ಲೋಹ
- ✕ ಮೇಣದ ಕಾಗದ ಮತ್ತು ಮೇಣ ಲೇಪಿತ ರಟ್ಟು
- ✕ ರಬ್ಬರ್ ಬ್ಯಾಂಡ್, ತಂತಿ ಕಟ್ಟು ಮತ್ತು ಸ್ಟಿಕ್ಕರ್‌ಗಳು
- ✕ ಡಯಾಪರ್‌ಗಳು
- ✕ ಪ್ರಮಾಣೀಕೃತವಲ್ಲದ 'ಜೈವಿಕ ವಿಘಟನೀಯ' ವಸ್ತುಗಳು

⚠ **ಕಂಟ್ರೋಲ್ ಪ್ಯಾನೆಲ್ ತೆರೆಯಬೇಡಿ ಅಥವಾ ವೈರಿಂಗ್ ಮುಟ್ಟಬೇಡಿ. ವಿದ್ಯುತ್ ಆಘಾತವಾದರೆ ತಕ್ಷಣ ಮುಖ್ಯ MCB ಆಫ್ ಮಾಡಿ ನಮಗೆ ಕರೆ ಮಾಡಿ.**